# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 19 |
| ಸದಸ್ಯರ ಹೆಸರು | : | ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 22.09.2020 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಆಟೋ ಟಿಪ್ಪರ್ ಚಾಲಕರಿಗೆ ಗುತ್ತಿಗೆದಾರರಾದ ಶ್ರೀ ಆದರ್ಶ ಎಂಟರ್ ಪ್ರೈಸಸ್ ಇವರು ಕಳೆದ 03 ತಿಂಗಳುಗಳಿಂದ ವೇತನ ನೀಡದೇ, ಗುತ್ತಿಗೆ ನೌಕರರಿಗೆ ತೊಂದರೆಯನ್ನುಂಟು ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ; | ಜುಲೈ-2020 ರವರೆಗೆ ಸಂಬಂಧಪಟ್ಟ ಅಧಿಕಾರಿಗಳ ಶಿಫಾರಸ್ಸಿನಂತೆ ಮೆ\|\| ಆದರ್ಶ ಎಂಟರ್ ಪ್ರೈಸಸ್ ರವರು ಪೂರೈಸಿದ ಚಾಲಕರ ವೇತನವನ್ನು ಗುತ್ತಿಗೆದಾರರಿಗೆ ನೀಡಲಾಗಿರುತ್ತದೆ ಮತ್ತು ಆಗಸ್ಟ್ 2020 ತಿಂಗಳ ವೇತನವನ್ನು ಮಾಸಾಂತ್ಯದೊಳಗಾಗಿ ಪಾವತಿಸಲು ಪಾಲಿಕೆ ವತಿಯಿಂದ ಕ್ರಮವಹಿಸಲಾಗಿದೆ. |
| ಆ) | ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಆಟೋ ಟಿಪ್ಪರ್ ಚಾಲಕರು, ಗುತ್ತಿಗೆದಾರರಿಗೆ ವೇತನವನ್ನು ಕೇಳಿದ್ದಕ್ಕೆ ಕಾನೂನು ಬಾಹಿರವಾಗಿ 52 ವಾಹನ ಚಾಲಕರನ್ನು ಕೆಲಸದಿಂದ ತೆಗೆದುಹಾಕಲಾಗಿರುವುದು ನಿಜವೇ;(ವಿವರ ನೀಡುವುದು) | ಪಾಲಿಕೆಯೊಂದಿಗಿರುವ ಟೆಂಡರ್ ಕರಾರಿನ ಪ್ರಕಾರ ಚಾಲಕರನ್ನು ಪೂರೈಸಲು ಗುತ್ತಿಗೆದಾರರಿಗೆ ಸೂಚಿಸಲಾಗಿರುತ್ತದೆ. ಯಾವುದೇ ಚಾಲಕರನ್ನು ನಿರ್ದಿಷ್ಟವಾಗಿ ತೆಗೆದುಕೊಳ್ಳಲು ಪಾಲಿಕೆ ಶಿಫಾರಸ್ಸು ಮಾಡಿರುವುದಿಲ್ಲ. |
| ಇ) | ಆಟೋ ಟಿಪ್ಪರ್ ಚಾಲಕರಿಗೆ ವೇತನವನ್ನು ನೀಡದೇ ದೌರ್ಜನ್ಯವೆಸಗುತ್ತಿರುವ ಗುತ್ತಿಗೆದಾರರ ಮೇಲೆ ಕ್ರಮ ಕೈಗೊಂಡು, ವಾಹನ ಚಾಲಕರಿಗೆ ನ್ಯಾಯವನ್ನು ಒದಗಿಸಲು ಸರಕಾರ ಕೈಗೊಳ್ಳುವ ಕ್ರಮಗಳೇನು? | ಗುತ್ತಿಗೆದಾರರು ಚಾಲಕರ ಮೇಲೆ ದೌರ್ಜನ್ಯ ಎಸಗದಂತೆ ನೋಡಿಕೊಳ್ಳಲಾಗುತ್ತಿದ್ದು, ಪ್ರತಿ ತಿಂಗಳು ಚಾಲಕರಿಗೆ ವೇತನ ಇ.ಎಸ್.ಐ ಹಾಗೂ ಇ.ಪಿ.ಎಫ್ ಪಾವತಿಸಿದ್ದನ್ನು ಪರಿಶೀಲಿಸಿಯೇ ಬಿಲ್ಲಿನ ಮೊತ್ತವನ್ನು ಮಹಾನಗರ ಪಾಲಿಕೆ ವತಿಯಿಂದ ಪಾವತಿಸಲಾಗುತ್ತಿದೆ. |

ಕಡತ ಸಂಖ್ಯೆ: ನಅಇ 38 ಎಹಚ್‌ಡಿ 2020(ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು